# ತಾರಾಮೌಲ್ಯ

■ ತೆಲುಗು ಮೂಲ: ತುಳಸಿ ಬಾಲಕೃಷ್ಣ
■ ಕನ್ನಡಕ್ಕೆ: ಇಂದ್ರಾಣಿ ವಿಠ್ಠಲ್

'ಹೇಗಿದೆ, ಈಗ ನಿನ್ನ ಮೈಗೆ...' ಎನ್ನುತ್ತಾ ಹೆಂಡತಿಯ ಹಣೆಯ ಮೇಲೆ ಕೈಯಿರಿಸಿದ ರಘುಪತಿ ಬೆಚ್ಚಿಬಿದ್ದು ಥಟ್ಟನೆ ಕೈಹಿಂತೆಗದುಕೊಂಡಿದ್ದಾನೆ. ಬಿಸಿಯುಸಿರ ಕಾವಿಂದ ಕಾದು ಹೋಗುತ್ತಿದೆ, ಜ್ವರದಿಂದ ಸುಡುತ್ತದೆ ಹಣೆ. ಇವತ್ತು ಜ್ವರ ಕಡಿಮೆಯಾಗಿದೆ. ಪಥ್ಯದ ಊಟ ಮಾಡಬಹುದು ಅಂದ್ಕೊಂಡೆ. ಹೀರೇಕಾಯಿ ಪಲ್ಯ, ಸಪ್ಪೆ ಸಾರು ಮಾಡಿದ್ದೀನಿ...ಸರಸ್ವತಿ ... ಮತ್ತೆ ಜ್ವರ ಇಷ್ಟೊಂದು ಬಂದಿದ್ಯಲ್ಲ...ಛೆ ...ಛೆ....ಛೆ. ಅಂತ ಆತಂಕ ಪಡತಾನೇ ಭಯದಿಂದಲೂ, ನೋವಿನಿಂದಲೂ, ಒಣಗಿ ಹೋಗುತ್ತಿರುವ ಗಂಟಲಿಂದ ಸಣ್ಣ ನಗುವೊಂದನ್ನು್ನ ಬಲವಂತವಾಗಿ ತಂದುಕೊಂಡು ಕ್ಷೀಣವಾಗಿ ಹೇಳ್ತಾಳೆ. ಗಂಡನ ಕಣ್ಣಲ್ಲಿ ಕಣ್ಣಿಟ್ಟು 'ಭಯ ಪಡಬೇಡಿ, ಜ್ವರ ತಾನೇ. ಕಡಿಮೆಯಾಗತ್ತೆ ಬಿಡಿ' ಒಣಗಿದ ತುಟಿಗಳನ್ನು ನಾಲಿಗೆಯಿಂದ ಒದ್ದೆ ಮಾಡಿಕೊಳ್ಳಲು ಪ್ರಯತ್ನ ಮಾಡ್ತಾಳೆ. ಬಾಯಿ ಮಾತಿಗೆ ಮೇಲೆ ಧೈರ್ಯ ಹೇಳಿದರೂ ಅವಳ ಆತಂಕ ಅವನಿಗರ್ಥವಾಗಿದೆ. ಒಳಗಿನಿಂದ ಅದುಮಿಟ್ಟುಕೊಂಡ ದುಃಖ ಕಣ್ಣರೆಪ್ಪೆಯ ಹಿಂದೆ ಅಡಗಿ ಕುಳಿತಿದೆ. ಕೆದರಿದ ತಲೆ ಕೂದಲು ಮುಖದ ಮೇಲೆ ಅಸ್ತವ್ಯಸ್ಥವಾಗಿ ಹರಡಿದ್ದನ್ನು ಗಮನಿಸಿ ಕೈಯಿಂದ ಹಿಂದೆ ಸರಿಸಿದ್ದಾನೆ. ಮತ್ತೆ ಅದೇ ಮೌನ.

ಗಂಡನ ಕಣ್ಣಲ್ಲಿನ ನೋವು ಗಮನಿಸಿ ಸರಸ್ವತಿ ಇಂಥ ಪರಿಸ್ಥಿತಿಯಲ್ಲೂ ಧೈರ್ಯಗೆಡದಿರುವಂತೆ ಮಾತನಾಡುತ್ತಿರುವಾಗಲೇ ಕಣ್ಣಲ್ಲಿ ಗತವೈಭವದ ಆ ದಿನಗಳ ನೆನಪು ಬಿಚ್ಚಿಕೊಳ್ತಾ ಇದ್ದಾಳೆ.

ಮದ್ರಾಸ್ ನ ಟಿ ನಗರದಲ್ಲಿನ ಮನೆಯ ಆ ದಿನಗಳು... ಬೆಳಗ್ಗೆ ಅಷ್ಟು ಬೇಗನೆ ಎದ್ದು ಹಲ್ಲುಜ್ಜಿ, ಸ್ನಾನ ಮಾಡಿ ಮುಗಿಸಿ ರಘುಪತಿ ಅಡಿಗೆ ಮನೆಗೆ ಸೀದಾ ಬಂದು ಒಂದು ಮಣೆಯನ್ನು ಎಳೆದುಕೊಂಡು ಕೂತು... ಇವಳು ಮಾಡಿದ ಇಡ್ಲಿ ಸಾಂಬಾರ್, ದೋಸೆಯೋ, ಉಪ್ಪಿಟ್ಟೋ ಹೊಟ್ಟೆ ತುಂಬ ತಿಂದು ಮುಗಿಸಿ ದೊಡ್ಡ ಲೋಟದ ತುಂಬ ಅವಳು ಹಾಕಿಕೊಟ್ಟ ಘಮ್ಮೆನ್ನುವ ಫಿಲ್ಟರ್ ಕಾಫಿ ಕುಡಿದು 'ಬ್ರೇವ್..' ಅಂತ ದೊಡ್ಡದಾಗಿ ತೇಗಿ 'ಅಲ್ಪಾಹಾರ ದಾತಾ ಸುಖೀಭವ' ಅಂತ ಮರೀದೇ ಹೆಂಡ್ತಿನ ನೀವಿಸಿ ವರಾಂಡದಲ್ಲಿ ಬಂದು ಕೂರುತ್ತಿದ್ದ. ಕುಳಿತ ಐದು ಹತ್ತು ನಿಮಿಷಗಳಲ್ಲಿ ಯಾವುದೋ ಪ್ರೊಡಕ್ಷನ್ ಕಾರೋ, ವ್ಯಾನೋ ಬರುತ್ತಿತ್ತು. ನಾಯಕನಾಗದೇ ಹೋದರೂ ಅದಕ್ಕೂ ಸರಿಸಮವಾದ ಕಥೆಯನ್ನ ಮುನ್ನಡೆಸಿಕೊಂಡು ಹೋಗುವ ಸಹ ಕಲಾವಿದ ಆತ. ಬಲು ಡಿಮ್ಯಾಂಡ್ ಇರೋ ನಟನಾಗಿದ್ದ.

ಪ್ರೊಡ್ಯೂಸರ್ ಅಥವಾ ಡೈರೆಕ್ಟರ್ ಯಾರೇ ಆಗಿರಲಿ ಸಿನಿಮಾದಲ್ಲಿನ ತಾರಾಗಣವನ್ನು ಆರಿಸುವಾಗ ಇಂಥ ಪಾತ್ರಕ್ಕೆ ಇವನೇ ಸರಿ ಎಂದು 'ಏ ರಘುಪತಿಯನ್ನು ಕರಿಸಿ ಬಿಡ್ರಪ್ಪ' ಅಂತ ಇಮೇಜ್, ವರ್ಚಸ್ಸು ಗಳಿಸಿದ್ದ ಸಹಕಲಾವಿದನಾಗಿದ್ದ. ಪಾತ್ರಗಳನ್ನು ತುಂಬ ಚೂಸಿಯಾಗಿಯೇ ಮಾಡಿಕೊಳ್ಳುತ್ತಿದ್ದ ದಿನಗಳು ಅವು. ದಿನಗಳು ಕಳೆದಂತೆ, ವ್ಯಕ್ತಿಗಳು ಬದಲಾದಂತೆ ಚಿತ್ರರಂಗದಲ್ಲಿಯೂ ಬದಲಾವಣೆಯ ಗಾಳಿ ಬೀಸಿತ್ತು. ಹೊಸ ಹೊಸ ರೀತಿಯ ಜನರು ಬರಲಾರಂಭಿಸಿದ್ದರು. ಬದಲಾದ ಪರಿಸರದಲ್ಲಿ ಹೊಸ ನೀರು ಬಂದು ಹಳೇ ನೀರು ಕೊಚ್ಚಿಕೊಂಡು ಹೋಯಿತು.

ರಘುಪತಿ ಮಾಡುತ್ತಿದ್ದ ರೀತಿಯ ಪಾತ್ರಗಳು ಎಲ್ಲೋ ಬೆರಳೆಣಿಕೆಯಷ್ಟು ಇರುತ್ತಿದ್ದು ಕ್ರಮೇಣ ಇಲ್ಲವೇ ಇಲ್ಲ ಎನ್ನುವಂತೆ ಮರೆಯಾಗಿ ಹೋದದ್ದು, 'ಹೊಡಿ... ಬಡಿ... ಕೊಲ್ಲು' ಎನ್ನುವ ಗೂಂಡಾಗಿರಿಯ ಕಥೆಯನ್ನು ಹೊಸೆಯುವವರ ಮಧ್ಯೆ ಕ್ಯಾರೆಕ್ಟರ್ ರೋಲ್ ಮಾಡುವ ರಘುಪತಿಗೆ ಡಿಮ್ಯಾಂಡ್ ಕಡಿಮೆಯಾಗಿತ್ತು. ಮುಂದೆ ಕೆಲಸವೂ ಇಲ್ಲ, ಸಂಪಾದನೆಯೂ ಇಲ್ಲ. ಕೂಡಿಟ್ಟಿದ್ದ ದೊಡ್ಡ ಮೊತ್ತದ ಹಣವು ಮಗಳ ಮದುವೆಗೆ ಖರ್ಚಾಗಿ ಹೋಗಿತ್ತು. ಈಗ ತಮ್ಮ ಈ ಹಳ್ಳಿಯ ಮನೆಯಲ್ಲಿಯೇ ವಾಸ್ತವ್ಯ ಹೂಡಿ ವರುಷಗಳೇ ಕಳೆದಿವೆ. ಇಂತಹ ಪರಿಸ್ಥಿತಿಯಲ್ಲಿ ಇವರು ತಾನೇ ಏನು ಮಾಡಿಯಾರು?

ಟಕ್..ಟಕ್ ...ಟಕ್ .. ಮುಂಬಾಗಿಲ ಮೇಲೆ ಬಡಿಯುವ ಸದ್ದಿಗೆ ವಾಸ್ತವಕ್ಕೆ ಬಂದ ಸರಸ್ವತಿಯ ಕಣ್ಣು ಮಂಜಾಗುವಂತೆ ಹನಿಗೂಡಿದೆ. ರಘುಪತಿ ಎದ್ದುಹೋಗಿ ಬಾಗಿಲು ತೆರೆಯುತ್ತಾನೆ. ಆಚೆ ನಿಂತವರು ಪಕ್ಕದ ಮನೆಯಾಕೆ ಸುಭದ್ರಮ್ಮ ಮತ್ತು ಹಿಂದೆ ಒಬ್ಬ ಯುವಕ. 'ಹೇಗಿದ್ದಾರೆ ಸರಸ್ವತಿ ಈಗ?' ಪ್ರಶ್ನಿಸ್ತಾಳೆ. 'ಹಾಂ.. ಊಹುಂ..' ಅಂತ ತಡವರಿಸಿ ಮಂಚದ ಕಡೆ ಮಲಗಿದ್ದ ಸರಸ್ವತಿಯತ್ತ ಬೆಟ್ಟುಮಾಡಿ ತೋರಿಸ್ತಾನೆ. ಸುಭದ್ರ ತನ್ನ ಹಿಂದೆ ನಿಂತಿದ್ದ ಯುವಕನಿಗೆ 'ರಾಜೂ, ನೀನು ಇವರ ಹತ್ರ ಮಾತಾಡ್ತಾ ಇರು' ಅಂತ ಸೀದಾ ಒಳಗೆ ನಡೆದಿದ್ದಾಳೆ.

'ನಮಸ್ಕಾರ! ನನ್ನ ಹೆಸರು ರಾಜೂ ಅಂತ' ಎರಡು ಕೈ ಜೋಡಿಸಿ ನಮಸ್ಕರಿಸಿದ ಹುಡುಗನಿಗೆ ಪ್ರತಿ ನಮಸ್ಕಾರ ಮಾಡುತ್ತಾ ರಘುಪತಿ ಈಚೆ ಬಂದು ಕಟ್ಟೆಯ ಮೇಲೆ ಕೂರುತ್ತಾ 'ಬನ್ನಿ ಕುಳಿತುಕೊಳ್ಳಿ' ಅಂತ ಔಪಚಾರಿಕವಾಗಿ ನುಡಿಯುತ್ತಾನೆ. ಪರಿಚಯ ಮಾಡಿಕೊಂಡ ಹತ್ತು ನಿಮಿಷಗಳಲ್ಲಿ ತನ್ನ ಮುಂದಿನ ಯೋಜನೆಗಳನ್ನು ರಘುಪತಿಯ ಮುಂದಿರಿಸುತ್ತಾನೆ ರಾಜು. ತಲೆ ಬಗ್ಗಿಸಿಕೊಂಡು ಅವನು ಹೇಳಿದ್ದನ್ನ ಕೇಳಿಸಿಕೊಂಡ ರಘುಪತಿ ಸಂದಿಗ್ಧದಲ್ಲಿ ಸಿಕ್ಕಿಬಿಟ್ಟಿದ್ದಾನೆ.

ಸುಭದ್ರಮ್ಮ ಹೊರಗೆ ಬರುತ್ತಾ 'ಮಾತಾಡಿದೆಯಾ ರಾಜೂ?' ಎಂದು ಕೇಳುತ್ತಾಳೆ. ಆ...'ಹ್ಞೂಂ...' ಅಂತಾ ಉತ್ತರಿಸಿ ತಲೆಯಾಡಿಸ್ತಾನೆ. ಆಕೆ ರಘುಪತಿಯನ್ನು ಉದ್ದೇಶಿಸಿ 'ಯೋಚನೆ ಮಾಡಿ ಅಣ್ಣ... ಈ ಹುಡುಗ ನಮ್ಮವನು. ಒಳ್ಳೆಯ ಹುಡುಗ, ನಂಬಿಕಸ್ಥ. ನಿಮ್ಮನ್ನ ಚೆನ್ನಾಗಿಯೇ ನೋಡಿಕೊಳ್ತಾನೆ. ಇಲ್ಲಿ ನಿಮ್ಮಾಕೆಗೆ ಹೇಗೋ? ಏನೋ? ಅಂತ ಯೋಚ್ನೆ ಮಾಡ್ತಾ ಇರಬೇಡಿ. ನಾವೆಲ್ಲ ಇದ್ದೀವಿ. ಬಂದು, ಹೋಗಿ ಮಾಡಿ ನೋಡಿಕೊಳ್ತೀವಿ ಬಿಡಿ. ದೊಡ್ಡ ಸಂಸಾರ ನಮ್ಮದು, ಯಾರಾದರೂ ಬರ್ತಿರ್ತಿವಿ. ಔಷಧಿ, ಪಥ್ಯ, ಅದು ಇದು ಅಂತ ಜ್ವರ ಕಡಿಮೆಯಾಗುವವರೆಗೂ ಮಾಡ್ತಿರ್ತೀವಿ. ನೀವು ಯೋಚನೆ ಮಾಡಬೇಡಿ' ಅಂತ ಖಂಡಿತವಾಗಿ ನುಡಿದು ರಾಜುವಿನೊಟ್ಟಿಗೆ ಹೊರಟು ಹೋದಳು.

ನೆಮ್ಮದಿಯಿಂದ ಎದ್ದು ಒಳಗೆ ನಡೆದಿದ್ದಾನೆ ರಘುಪತಿ. 'ಏನು ನಿರ್ಧಾರ ಮಾಡಿದಿರಿ?' ಕ್ಷೀಣವಾಗಿ ಗಂಟಲಿಂದ ಹೊರಬಂದಿದೆ ಸರಸ್ವತಿಯ ಧ್ವನಿ. ಕಸಿವಿಸಿಯಿಂದ ಅವಳ ಮುಖವನ್ನೇ ದಿಟ್ಟಿಸಿದ ರಘುಪತಿ 'ಆಕೆ ನಿನಗೆ ಹೇಳಿದರಾ?' ಅಂತಾನೆ 'ಹ್ಞೂಂ..' ಅಂತ ತಲೆ ಆಡಿಸಿದವಳೇ, ತುಟಿ ಮೇಲೆ ನಗುವನ್ನು ತಂದುಕೊಂಡು 'ಹೋಗಿ ಬನ್ನಿ' ಅಂತಾಳೆ. ಆಶ್ಚರ್ಯ ಪಡುತ್ತಾನೆ ರಘುಪತಿ. 'ಸರಸ್ವತಿ, ಆಕೆ ನಿನಗೆ ಹೇಳಿದ್ದಾರಾ? ನೀ ಸರಿಯಾಗಿ ಕೇಳಿಸಿಕೊಂಡ್ಯಾ?'. ಆ ಹುಡುಗ ಟಿವಿ ಸೀರಿಯಲ್ ಗಳಿಗೆ ಸಹ ಕಲಾವಿದರನ್ನ ಸಪ್ಲೈ ಮಾಡೋ ಹುಡುಗ. ಅದೇ, ನಮ್ಮ ಸಿನಿಮಾಗಳಲ್ಲಿ 'ಎಕ್ಸ್ಟ್ರಾ' ಸಪ್ಲೈಮಾಡೋವರು ಇರತಾರಲ್ಲ ಹಾಗೆ. ಆವತ್ತಿನ ಸೀನ್ ನಲ್ಲಿ ಬೇಕಾದ